## 1. ಸರ್ಕಾರಿ ಪ್ರೌಢ ಶಾಲೆ ಅರಳಿಹಳ್ಳಿ, ಭದ್ರಾವತಿ, ಶಿವಮೊಗ್ಗ .

ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ ಹೋಬಳಿಯ, ಸರ್ಕಾರಿ ಪ್ರೌಢ ಶಾಲೆ ಅರಳಿಹಳ್ಳಿಯು ದಿನಾಂಕ 22-07-1982ರಂದು 8ನೇ ತರಗತಿಯಿಂದ ಕೇವಲ 33 ವಿದ್ಯಾರ್ಥಿಗಳಿಂದ ಪ್ರಾರಂಭವಾಗಿದ್ದು. ಈ ಶಾಲೆಯು ಗ್ರಾಮಪಂಚಾಯತಿ ಕಟ್ಟಡದಲ್ಲಿ ನಡೆಯುತ್ತಿತ್ತು. ತದನಂತರ ನೀರಾವರಿ ಇಲಾಖೆ ವತಿಯಿಂದ 5 ಎಕರೆ ಜಾಗವನ್ನು ಮಂಜುರಾತಿ ಮಾಡಿಸಿ ಶಿಕ್ಷಣ ಇಲಾಖೆಗೆ ನೀಡಿರುತ್ತಾರೆ. ಈ ಶಾಲೆಯು ಪ್ರಥಮ ಹಂತದಲ್ಲಿ 3 ಕೊಠಡಿಗಳಿಂದ ಪ್ರಾರಂಭಿಸಲಾಯಿತು. ಪ್ರತಿ ವರ್ಷವೂ ಹಂತ ಹಂತವಾಗಿ ಕೊಠಡಿಗಳು ಮಂಜೂರಾಗಿ ಕಟ್ಟಡ ನಿರ್ಮಾಣ ಆಗಿರುತ್ತದೆ.

### -: ಶಾಲೆಗೆ ಭೌತಿಕ ಸೌಲಭ್ಯಗಳ ಮಾಹಿತಿ :-

ಶಾಲೆಗೆ ಪೂರಕವಾಗಿ ಮತ್ತು ಅಗತ್ಯತೆಗೆ ಅನುಗುಣವಾಗಿ ಆದ್ಯತೆಯ ಮೇರೆಗೆ ದಾನಿಗಳ ಸಹಕಾರದಿಂದ

**1. ಶಾಲೆಯ ಸುತ್ತಲೂ ಕಾಂಪೌಂಡ್ ನಿರ್ಮಾಣ.**

ಬಹುಮುಖ್ಯವಾಗಿ ಶಾಲಾ ಕೊಠಡಿಗಳ ಸುತ್ತಲೂ ಮದ್ಯವನ್ನು ಕುಡಿದು ಬಾಟಲಿಗಳನ್ನು ಹಾಕುವುದು, ಶೌಚಮಾಡಿ ಗಲೀಜು ಮಾಡುತ್ತಿರುವುದನ್ನು ಗಮನಿಸಿ ಎಸ್.ಡಿ.ಎಂ.ಸಿ / ಗ್ರಾಮಪಂಚಾಯತಿ / ಗ್ರಾಮಸ್ಥರು / ಪೋಷಕರು ಹಾಗು ಶಿಕ್ಷಕರ ಸಹಕಾರದಿಂದ ಐದು ಎಕರೆ ಜಾಗದಲ್ಲಿ ಎನ್.ಆರ್.ಇ.ಜಿ.ಎ ವತಿಯಿಂದ ಸುಮಾರು 10,00,000/-(ಹತ್ತು ಲಕ್ಷರೂಗಳು) ರೂಪಾಯಿಗಳ ವೆಚ್ಚದಿಂದ ಸುಸಜ್ಜಿತವಾದ ಕಾಂಪೌಂಡ್ ನಿಮಾರ್ಣಮಾಡಲಾಯಿತು.

**2. ಬೈಸಿಕಲ್ ಸ್ಟ್ಯಾಂಡ್ :-**

ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು ಬೈಸಿಕಲ್ ನಿಲ್ಲಿಸಲಿಕ್ಕೆ ಸುಸಜ್ಜಿತವಾದ ಬೈಸಿಕಲ್ ಸ್ಟ್ಯಾಂಡನ್ನು, ಮಾನ್ಯ ಶಾಸಕರಾದ ಶ್ರೀ ಎಂ.ಜೆ. ಅಪ್ಪಾಜಿಯವರು ಶಾಸಕರ ನಿಧಿಯಿಂದ ರೂ.2,50,000/- ( ಎರಡು ಲಕ್ಷದ ಐವತ್ತು ಸಾವಿರ ) ಗಳ ಸಹಾಯದಿಂದ ನಿರ್ಮಾಣ ಮಾಡಲಾಯಿತು.



3. ಗಂಡು ಮಕ್ಕಳ ಶೌಚಾಲಯಕ್ಕೆ ಜಿಲ್ಲಾ ಪಂಚಾಯಿತಿಯಿಂದ 1.40 ಲಕ್ಷರೂಗಳ ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗಣೇಶ್ ಕಾರ್ಣಿಕ್‌ರವರ ಅನುದಾನದಿಂದ ಒಂದು ಲಕ್ಷ ರೂಗಳನ್ನು ಒಟ್ಟು 2,40,000/– ರೂಗಳಿಂದ ಉತ್ತಮವಾದ ಶೌಚಾಲಯವನ್ನು ನಿರ್ಮಾಣ ಮಾಡಲಾಗಿರುತ್ತದೆ ಹಾಗೂ ಹೆಣ್ಣು ಮಕ್ಕಳಿಗೆ ಎನ್ ಆರ್ ಇ ಜಿ ಎ ವತಿಯಿಂದ 70,000/–ರೂ ಅನುದಾನದಲ್ಲಿ ನಿರ್ಮಿಸಲಾಗಿದೆ ಹಾಗೂ ಶ್ರೀ ಪಾರ್ಥಿಬನ್ ರವರಿಂದ ಎ.ಪಿ.ಜೆ. ಅಬ್ದುಲ್ ಕಲಾಂ, ಸಾವಿತ್ರಿಬಾಯಿ ಪುಲೆ ಹಾಗೂ ಶಾಲೆಯ ಹೆಸರುಳ್ಳ ನಾಮಫಲಕವನ್ನು 11,000/–ರೂ ಅನುದಾನದಲ್ಲಿ ರಂಗಮಂದಿರಕ್ಕೆ ಹಾಕಿಸಿದ್ದಾರೆ.

4. ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಮಣಿಶೇಖರ್ ರವರಿಂದ 2,50,000/– ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶ್ರೀಯುತ ಮಂಜುನಾಥ ರವರಿಂದ 1,50,000/–ರೂಗಳ ಸಹಾಯದಿಂದ 30:30 ಅಳತೆಯ ಜಾಗದಲ್ಲಿ ಕೊಠಡಿ ನಿರ್ಮಾಣವಾಗಿರುತ್ತದೆ.



5. ವಯೋನಿವೃತ್ತಿ ಹೊಂದಿರುವಂತಹ ಶ್ರೀಮತಿ ನಾಗರತ್ನಮ್ಮ, ಹಿಂದಿ ಶಿಕ್ಷಕರು ಹತ್ತು ಸಾವಿರ ರೂಗಳ ದೇಣಿಗೆ ಹಾಗೂ ಎಸ್.ಡಿ.ಎಂ.ಸಿ ವತಿಯಿಂದ ರೂ 20,000/–ಸೇರಿಸಿ ಒಟ್ಟು ರೂ 30,000/–ದಲ್ಲಿ ಸುಸಜ್ಜಿತ ಧ್ವಜಸ್ಥಂಭ ಹಾಗೂ ಕಟ್ಟಡವನ್ನು ನಿರ್ಮಿಸಿರುತ್ತೇವೆ.



**6. ಜಲಾನಯನ ತೊಳೆಯುವ ಘಟಕ :–**

ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳಿಗೆ ಪ್ರತ್ಯೇಕವಾಗಿ ಜಲಾನಯನ ತೊಳೆಯುವ ಘಟಕವನ್ನು ಶಾಲಾ ಅಭಿವೃದ್ಧಿ ಸಮಿತಿವತಿಯಿಂದ 40 ನಲ್ಲಿಗಳಿಂದ ಕೂಡಿರುವ ಘಟಕವನ್ನು ಸುಮಾರು 60,000/–ರೂಗಳ ವೆಚ್ಚದಲ್ಲಿ ನಿರ್ಮಿಸಿದೆ.





**7. ಪ್ರಾರ್ಥನಾ ಸಭಾಂಗಣ :–**

500 ವಿದ್ಯಾರ್ಥಿಗಳು ಏಕಕಾಲದಲ್ಲಿ ಕುಳಿತು ಪ್ರಾರ್ಥನೆ, ಬಿಸಿಯೂಟ, ಹಾಲುಸೇವನೆ ಸಾಂಸ್ಕೃತಿಕ ಕಾರ್ಯಕ್ರಮ, ಸಭೆ ಸಮಾರಂಭಗಳಿಗೆ ಅನುಕೂಲವಾಗುವಂತೆ ಮಾನ್ಯ ಶಾಸಕರಾದ ಎಂ.ಜೆ.ಅಪ್ಪಾಜಿಯವರ ನಿಧಿಯಿಂದ ರೂ 4,50,000/–ತಾಲ್ಲುಕು ಪಂಚಾಯತ್ ಸದಸ್ಯರಾದ ಶ್ರೀಮತಿ ಸೋಮ್ಲೀಬಾಯಿ ಇವರ ನಿಧಿಯಿಂದ ರೂ 5,00,000/– ಶ್ರೀ ಪದ್ಮನಾಭ ಭಟ್‌ರವರಿಂದ ರೂ 1,50,000/– ಶ್ರೀ ಆರ್.ಕೆ ಸಿದ್ದರಾಮಣ್ಣ ಎಂ.ಎಲ್.ಸಿ ರವರಿಂದ ರೂ 2,00,000/– ಒಟ್ಟು 13 ಲಕ್ಷದಲ್ಲಿ ನಿಮಾಣಗೊಂಡಿದೆ.





**8. ನೆಲಹಾಸು :–**

ತರಗತಿ ಕೊಠಡಿಗಳ ಮುಂಭಾಗದಲ್ಲಿ ಸುಮಾರು 100 ಥ 60 ಮೀ ಜಾಗದಲ್ಲಿ ನೆಲಹಾಸನ್ನು ಹಾಕುವುದಕ್ಕೆ ಮಾನ್ಯ ಡಿ.ಹೆಚ್ ಶಂಕರ ಮೂರ್ತಿ ವಿಧಾನ ಪರಿಷತ್ ಸದಸ್ಯರ ನಿಧಿಯಿಂದ ರೂ 3,00,000/– ತಾಲ್ಲುಕು ಪಂಚಾಯತ್ ಸದಸ್ಯರಿಂದ ರೂ 1,50,000/–ಒಟ್ಟು 4,50,000/–ರೂಗಳಲ್ಲಿ ನಿರ್ಮಾಣಗೊಂಡಿದೆ. ನೆಲಹಾಸನ್ನು ವಿದ್ಯಾರ್ಥಿಗಳ ಗುಂಪು ಅಧ್ಯಯನ ಹಾಗೂ ಸ್ವಚ್ಛತೆಯನ್ನು ಕಾಪಾಡಲು ಅನುಕೂಲವಾಗುವುದು.



**9.ಗೇಟ್ ಮತ್ತು ಜಾಲರಿ :–**

ಮಾನ್ಯ ಭಾನುಪ್ರಕಾಶ್, ವಿಧಾನ ಪರಿಷತ್ ಸದಸ್ಯರು ರೂ 3,00,000/– ಅನುದಾನದಲ್ಲಿ ಆಟದ ಮೈದಾನಕ್ಕೆ, ಪ್ರವೇಶದ್ವಾರಕ್ಕೆ ಗೇಟು, ಗಂಡು ಮಕ್ಕಳ ಶೌಚಾಲಯಕ್ಕೆ ಹೋಗುವ ದಾರಿಗೆ ಗೇಟು ಹಾಗೂ ಉಳಿದ ಸ್ಥಳಗಳಲ್ಲಿ ಜಾಲರಿಯನ್ನು ಹಾಕಲಾಗಿದೆ. ಇದು ಶಾಲಾ ಕಟ್ಟಡದ ಸುರಕ್ಷತೆಗೆ ಪ್ರಯೋಜನಕಾರಿಯಾಗಿದೆ.



**10. ಸ್ಟೀಲ್ ಸ್ಟಾಂಡ್ ಗಳು :–**

ನಿವೃತ್ತ ಶಿಕ್ಷಕರಾದ ಶ್ರೀಮತಿ ಡಿ.ಲಲಿತಮ್ಮರವರಿಂದ 15,000/–ರೂಗಳು ಶ್ರೀಮತಿ ಜೆ.ವಿ ನಾಗರತ್ನಮ್ಮರವರಿಂದ 7,000/–ರೂಗಳು ಹಾಗೂ ಎಸ್.ಡಿ.ಎಂ.ಸಿ ವತಿಯಿಂದ ರೂ 59,000/–ಗಳಿಂದ ಒಟ್ಟು 81,000/–ರೂ ವೆಚ್ಚದಲ್ಲಿ ಪ್ರತಿ ತರಗತಿಗಳಿಗೂ ಸ್ಟೀಲ್ ಸ್ಟಾಂಡ್ ಗಳನ್ನು ಅಳವಡಿಸಲಾಗಿದೆ. ಇದು ಪ್ರತಿ ವಿದ್ಯಾರ್ಥಿಗೂ ತನ್ನ ಊಟದ ತಟ್ಟೆ ಹಾಗೂ ಲೋಟ ಇರಿಸಲು ಪ್ರತಿ ದಿನ ತರುವ ಹೊರೆ ಇಳಿಸಲು ಅನುಕೂಲಕರವಾಗಿದೆ.

11. ಶೈಕ್ಷಣಿಕ ಗುಣಮಟ್ಟ ಸುಧಾರಣೆ ಕೈಗೊಂಡ ಕ್ರಮಗಳು :–

1. ವಿದ್ಯಾರ್ಥಿಗಳ ದಾಖಲಾತಿ ಪ್ರತಿ ವರ್ಷವೂ ಹೆಚ್ಚಳವಾಗಿದೆ. 2008ರಲ್ಲಿ 5 ವಿಭಾಗಗಳಿದ್ದು 280 ವಿದ್ಯಾರ್ಥಿಗಳಿದ್ದರು. ಪ್ರಸ್ತುತ ಸಾಲಿನಲ್ಲಿ 10 ವಿಭಾಗಗಳಿಂದ 483 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 2016–17ನೇ ಸಾಲಿನಿಂದ ಆಂಗ್ಲಮಾಧ್ಯಮವನ್ನು ಆರಂಭಿಸಲಾಗಿದೆ.

2. ಪ್ರತಿ ವರ್ಷ ಎಸ್.ಎಸ್.ಎಲ್.ಸಿ ಯಲ್ಲಿ 150–160 ವಿದ್ಯಾರ್ಥಿಗಳು ಪರೀಕ್ಷಾ ಮಂಡಳಿಗೆ ನೋಂದಣಿಯಾಗುತ್ತಾರೆ.

3. ಎಸ್.ಎಸ್.ಎಲ್.ಸಿ ಫಲಿತಾಂಶ

2014 – 97% 2015 – 85% 2016 –94% 2017 – 82% 2018 – 74% ಫಲಿತಾಂಶವನ್ನು ನಮ್ಮ ಶಾಲೆ ಪಡೆದಿದೆ.

ವಿಶೇಷ ಸಾಧನೆ :–

ಪ್ರತಿ ವರ್ಷ ನಮ್ಮ ಶಾಲೆ ವಿದ್ಯಾರ್ಥಿಗಳು ಎನ್.ಎಂ.ಎಂ.ಎಸ್ ಪರೀಕ್ಷೆಯಲ್ಲಿ 4–5 ವಿದ್ಯಾರ್ಥಿಗಳು ಆಯ್ಕೆಗೊಂಡಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ದೊರೆಯುತ್ತಿದೆ ಹಾಗೂ ಶಿಕ್ಷಕರು ವಿಶೇಷ ತರಗತಿಗಳ ಮೂಲಕ ಮಾರ್ಗದರ್ಶನ ( ಬೆಳಿಗ್ಗೆ ಮತ್ತು ಸಂಜೆ ) ಮಾಡಿರುತ್ತಾರೆ.

ಕ್ರೀಡಾ ಕ್ಷೇತ್ರದಲ್ಲಿ 2012 ರಿಂದ 2018 ರವರೆಗೆ ಪ್ರತಿವರ್ಷ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಆಯ್ಕೆಯಾಗಿ ಪ್ರಶಸ್ತಿಗಳನ್ನು ಪಡೆದು ಶಾಲೆಗೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿರುತ್ತಾರೆ.

ಇತರೆ ಕಾರ್ಯ ಯೋಜನೆಗಳು :–

1.ವಸ್ತು ಪ್ರದರ್ಶನಗಳನ್ನು ಪ್ರತಿವರ್ಷ ಡಿಸೆಂಬರ್ ಮಾಹೆಯಲ್ಲಿ ಆರು ವಿಷಯಗಳು ಹಾಗೂ ದೈಹಿಕ ಮತ್ತು ಹೊಲಿಗೆ ವಿಷಯಕ್ಕೆ ಸಂಬಂಧಿಸಿದಂತೆ ಹಮ್ಮಿಕೊಂಡು ವಿಜೇತರಿಗೆ ಬಹುಮಾನಗಳನ್ನು ವಿತರಿಸಿ ಕಲಿಕೆಗೆ ವಿಶೇಷ ಗಮನವನ್ನು ನೀಡಲಾಗುತ್ತಿದೆ.

2. ಪೋಷಕರಿಗೆ, ಶಿಕ್ಷಕರಿಗೆ ಕ್ರೀಡಾಕೂಟವನ್ನು ನಡೆಸಿ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಗಿದೆ.

3. ಪ್ರತಿ ವರ್ಷವೂ ಸಹ ಶಾಲೆಯಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿಗಳಿಂದ ಪೋಷಕರಿಗೆ ಪಾದಪೂಜಾ ಕಾರ್ಯಕ್ರಮವನ್ನು ನಡೆಸಿಕೊಂಡು ಬರಲಾಗಿದೆ.

4. ಪ್ರತಿ ತಿಂಗಳು 8,9,10ನೇ ತರಗತಿಯ ವಿದ್ಯಾರ್ಥಿಗಳ ಪೋಷಕರ ಸಭೆಯನ್ನು ನಡೆಸಲಾಗಿದೆ. ಸಭೆಯಲ್ಲಿ ವಿದ್ಯಾರ್ಥಿಗಳ ವಿಷಯವಾರು ಶೈಕ್ಷಣಿಕ ಅಭಿವೃದ್ಧಿ ಕುರಿತು ಚರ್ಚಿಸಲಾಗಿದೆ.

 

5. ಶಾಲೆಯು ಸ್ಮಾರ್ಟ್ ಕ್ಲಾಸ್, ವಿಜ್ಞಾನ ಪ್ರಯೋಗಾಲಯ, ಗ್ರಂಥಾಲಯ ಸೌಲಭ್ಯಗಳನ್ನು ಒಳಗೊಂಡಿದೆ.

6. ಶಾಲೆಯಲ್ಲಿ ವಿಜ್ಞಾನಿಗಳು, ಕವಿಗಳು, ಸಾಧಕರ ಚಿತ್ರಪಟಗಳನ್ನು ಪ್ರತಿ ಕೊಠಡಿಗಳಲ್ಲಿ ಪ್ರದರ್ಶಿಸಲಾಗಿದೆ.

7. ಶಾಲೆಯು ಸಿ.ಸಿ.ಟಿವಿಯ ಕಣ್ಗಾವಲಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಹೆಚ್ಚು ಅಂಕಗಳನ್ನು ಪಡೆಯುವ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗಿದೆ ಹಾಗೂ ಶಾಲೆಯ ಆಸ್ತಿಯನ್ನು ಸಾರ್ವಜನಿಕರಿಂದ ಕಾಪಾಡಿದಂತಾಗುತ್ತದೆ.

8. ಪ್ರತಿವರ್ಷ ಎಸ್.ಎಸ್.ಎಲ್.ಸಿ ಯಲ್ಲಿ ಅತಿಹೆಚ್ಚು ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರಾದಂತಹ ಶ್ರೀ ಮಹಮದ್ ಅಯಾತ್, ಜಿಲ್ಲಾ ಪಂಚಾಯತಿ ಸದಸ್ಯರಾದಂತಹ ಶ್ರೀ ಮಣಿಶೇಖರ್, ತಾಲ್ಲೂಕು ಪಂಚಾಯತಿ ಸದಸ್ಯರಾದ ಮಂಜುನಾಥ್, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದಂತಹ ಶ್ರೀ ಪಾರ್ಥಿಬನ್ ಹಾಗೂ ಊರಿನ ಮುಖಂಡರಾದ ವಾಸುದೇವ ನಾಯ್ಡು ಹಾಗೂ ಎಸ್.ಡಿ.ಎಂ.ಸಿ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಗ್ರಾಮಸ್ಥರು ಸೇರಿ ಈ ಕಾರ್ಯಕ್ರಮವನ್ನು ನಡೆಸಿಕೊಡುತ್ತಾರೆ.

9. ಗೌಂಡರ್ ಯುವಕ ಸಂಘ ಅರಳಿಹಳ್ಳಿ ವತಿಯವರು ಪ್ರತಿ ವರ್ಷ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಆಯ್ಕೆಯಾದ ಕ್ರೀಡಾಪಟುಗಳ ಮತ್ತು ಶಾಲೆಯ ಫಲಿತಾಂಶದ ವಿವರಗಳನ್ನೊಳಗೊಂಡ ದೊಡ್ಡ ಫ್ಲೇಕ್ಸಿಯನ್ನು ಅರಳಿಹಳ್ಳಿಯಲ್ಲಿ ಹಾಕಿಸುತ್ತಾರೆ.

10. ವಿದ್ಯಾರ್ಥಿ ನಿಧಿ :- ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 60% ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹದೊಂದಿಗೆ ಪ್ರಶಸ್ತಿಪತ್ರ ಮತ್ತು ಫಲಕಗಳನ್ನು ನೀಡಿ ಗೌರವಿಸುವ ಕಾರ್ಯ ವಿಶೇಷವಾಗಿ ನಮ್ಮ ಶಾಲೆಯಲ್ಲಿ ಆಚರಿಸಲಾಗುವುದು. ಅದಕ್ಕೆ ತಗಲುವ ವೆಚ್ಚವನ್ನು ಭರಿಸಲು ನಿಧಿ ಸಂಗ್ರಹಿಸಲು ತೀರ್ಮಾನಿಸಲಾಯಿತು. ಕೆಳಕಂಡವರು ಈ ನಿಧಿಗೆ ದೇಣಿಗೆ ನೀಡಿರುತ್ತಾರೆ. ಶ್ರೀಮತಿ ತಿಲೋತ್ತಮ್ಮ ನಿವೃತ್ತ ಶಿಕ್ಷಕಿ, ಶ್ರೀ ರಾಮಯ್ಯ ಮತ್ತು ಶ್ರೀ ಲಕ್ಷ್ಮಯ್ಯ ಶ್ರೀ ಕೋಟಯ್ಯ ಶ್ರೀ ಬಸವರಾಜ್ ಎಸ್ ಶ್ರೀಮತಿ ಜ್ಯೋತಿ ಕೆ ದೈಹಿಕ ಶಿಕ್ಷಕರು, ಶ್ರೀ ಕೆ ಬಾಲಸುಬ್ರಮಣಿ ಹಾಗು ಇನ್ನೂ ಕೆಲವರು ಮುಂದೆ ದೇಣಿಗೆ ನೀಡುವುದಾಗಿ ತಿಳಿಸಿರುತ್ತಾರೆ.

# ಶಾಲಾ ವಸ್ತು ಪ್ರದರ್ಶನ 2018–19







